**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

ಓ.ಎಸ್.38/2022

ಸಾಕ್ಷಿಯನ್ನು ದಿಃ **27.06.2025** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎನ್.ಎನ್ ವಕೀಲರಿಂದಃ-

ಪ್ರತಿವಾದಿಯರಿಂದ ಒಟ್ಟು 3 ಕರಾರುಗಳನ್ನು ಮಾಡಿಸಿಕೊಂಡಿದ್ದೇನೆ. 3 ಕರಾರು ಪತ್ರಗಳಿಗೆ ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ಮೊದಲನೇ ಕರಾರು ದಿಃ 07.02.2015 ರಂದು ಆಗಿದೆ. ಎರಡನೇಯ ಕರಾರು ದಿಃ 19.01.2018 ರಂದು ಆಗಿದೆ. ಮೂರನೇ ಕರಾರು ದಿಃ 27.12.2019 ರಂದು ಆಗಿದೆ. ಸದರಿ ಕರಾರುಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ. ನಿಪಿ-1ರ ಕ್ರಯದ ಕರಾರಿನಲ್ಲಿ ರೂ. 42 ಲಕ್ಷ ಗಳಿಗೆ ಶುದ್ಧಕ್ರಯಕ್ಕೆ ಕೊಡಲು ಒಪ್ಪದಂದ ಮಾಡಿಕೊಂಡು ಈ ದಿವಸ ಕೆಳಕಂಡ ಸಾಕ್ಷಿಗಳ ಮೊತ್ತ ಕ್ರಯದ ಮೊಬಲಗಿನ ಪೈಕಿ ಮುಂಗಡವಾಗಿ ರೂ.30 ಲಕ್ಷಗಳನ್ನು ಪಡೆದುಕೊಂಡಿರುತ್ತೇನೆ ಉಳಿಕೆ ಕ್ರಯದ ಮೊಬಲಗು 12 ಲಕ್ಷಗಳ ಪೈಕಿ ಸುಂದರಂ ಫೈನಾನ್ಸ್ ನಲ್ಲಿ ಸ್ವತ್ತಿನ ಮೇಲೆ ಇರುವ ರೂ.10,80,000/- ನೀವೇ ತೀರಿಸಿಕೊಂಡು ಉಳಿಕೆ 1,20,000/- ಈ ಲಗಾಯ್ತು ಮೂರು ವರ್ಷ ವಾಯಿದೆಬಳಗಾಗಿ ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸುಂದರಂ ಫೈನಾನ್ಸ್ ನ ರೂ.10,80,000/- ನಾವು ಕೊಡಲು ಆಗುವುದಿಲ್ಲ. ನೀವೇ ಕೊಡಿ ಎಂದು ಹೇಳಿ ಸದರಿ ಹಣವನ್ನು ಅದೇ ದಿನ ಉಪನೊಂದಾಣಾಧಿಕಾರಿಗಳ ಕಚೇರಿಯ ಹೊರಗೆ ನಾನು ಪ್ರತಿವಾದಿಯರಿಗೆ ಕೊಟ್ಟಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಈ ವಿಷಯವನ್ನು ನಿಪಿ-1 ರಲ್ಲಿ ಬರೆಸಿದ್ದಿರಾ ಎಂದರೆ ಇಲ್ಲ. ರೂ.10,80,000/- ಅದೇ ದಿನ ಕೊಟ್ಟಿದ್ದೇನೆ ಎಂದು ತೋರಿಸಲು ನ್ಯಾಯಾಲಯದ ಮುಂದೆ ಯಾವುದೇ ದಾಖಲೆ ಕೊಟ್ಟಿಲ್ಲ. ನಿಪಿ-3 ರ ದಾಖಲೆಯಲ್ಲಿ ಮೇಲೆ ಹೇಳಿದ ರೂ.10,80,000/-ನ್ನು ಉಪನೊಂದಾಣಾಧಿಕಾರಿಗಳ ಕಚೇರಿಯ ಹೊರಗೆ ಕೊಟ್ಟಿದ್ದೇನೆ ಎಂದು ಬರೆದಿಲ್ಲ. ನನ್ನ ಗಂಡನ ಹೆಸರು ಟಿ.ಆರ್ ರಾಜಶೇಖರ್. ನನ್ನ ಗಂಡ ಚೀಟಿ ವ್ಯವಹಾರ ಮಾಡುವುದಿಲ್ಲ. ನಾವು ಜೀವನಕ್ಕಾಗಿ ಮಿಲ್ಟ್ರಿ ಹೋಟೆಲ್ ಇಟ್ಟುಕೊಂಡಿದ್ದೇವೆ.

1ನೇ ಪ್ರತಿವಾದಿ ಎಳನೀರು ವ್ಯಾಪಾರ ಮಾಡುತ್ತಾರೆ. ಅದನ್ನು ಹೊರತುಪಡಿಸಿ ಅವರು ಬೇರೆ ವ್ಯವಹಾರ ಮಾಡವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು 1ನೇ ಪ್ರತಿವಾದಿಯ ಅಂಗಡಿ ನೋಡಿಲ್ಲ. ಅವರು ಮಾಡುವ ಎಳನೀರು ವ್ಯಾಪಾರವನ್ನು ಹೊರತುಪಡಿಸಿ ಬೇರೆ ಏನು ನೋಡಿಲ್ಲ. ಟಿ.ಆರ್ ಅಶೋಕ ಎಂದರೆ ನನ್ನ ಭಾವ. 1ನೇ ಪ್ರತಿವಾದಿ ನನ್ನ ಗಂಡನಿಗೆ ಪರಿಚಯ. ಯಾವ ರೀತಿ ಪರಿಚಯ ಎಂದರೆ ಅವರು ಸ್ನೇಹಿತರಾಗಿದ್ದರು. ದಾವಾ ಸ್ವತ್ತಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಕುಮಾರಸ್ವಾಮಿ, ಉತ್ತರಕ್ಕೆ ರಾಜಶೇಖರ ಪುಟ್ಟಮ್ಮ, ದಕ್ಷಿಣಕ್ಕೆ ರಾಮರಾವ್ ರವರ ನಿವೇಶನ. ನನಗೆ ಕನ್ನಡ ಓದಲು ಬರುತ್ತದೆ.

ನಿಪಿ-5 ರಲ್ಲಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಲಲಿತಾ ಜಿ.ಟಿ ದೇವೇಗೌಡರವರ ಮನೆ, ಉತ್ತರಕ್ಕೆ ರಾಜಶೇಖರ್ ರವರ ಮನೆ, ದಕ್ಷಿಣಕ್ಕೆ ಖಾಲಿ ನಿವೇಶನ ಎಂದು ಬರೆಯಲಾಗಿದೆ. 1ನೇ ಪ್ರತಿವಾದಿ ನನ್ನ ಬ್ಯಾಂಕ್ ಖಾತೆಗೆ, ನನ್ನ ಗಂಡನ ಬ್ಯಾಂಕ್ ಖಾತೆಗೆ, ನನ್ನ ಭಾವ ಟಿ.ಆ್‌ರ್ ಅಶೋಕ್ ರವರ ಬ್ಯಾಂಕ್ ಖಾತೆಗೆ ಮತ್ತು ನನ್ನ ನಾದಿನಿ ಜ್ಯೋತಿ ರವರ ಬ್ಯಾಂಕ್ ಖಾತೆಗೆ IMPS ಮೂಲಕ ಸುಮಾರು 5 ಕೋಟಿಗೂ ಹೆಚ್ಚು ಹಣ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಅಷ್ಟು ಹಣ ಅವರ ಖಾತೆಯಿಂದ ನಮ್ಮಗಳ ಖಾತೆಗೆ ವರ್ಗಾವಣೆಯಾಗಿದ್ದರೂ ಸಹ ಹಣ ಬಂದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬ್ಯಾಂಕ್ ಖಾತೆ, ನನ್ನ ಗಂಡ, ನನ್ನ ಬಾವ ಮತ್ತು ನನ್ನ ನಾದಿನಿಯ ಬ್ಯಾಂಕ್ ಖಾತೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ನನ್ನ ಬ್ಯಾಂಕ್ ಖಾತೆಯ ಬಗ್ಗೆಯೇ ನನಗೆ ಗೊತ್ತಿಲ್ಲ. ಬ್ಯಾಂಕ್ ಖಾತೆಯ ಸ್ಟೇಟ್ಮೆಂಟ್ ಗಳನ್ನು ಕೊಟ್ಟರೇ ನಿಜಾಂಶ ಹೊರಬರುತ್ತದೆ ಎಂದು ನಾನು ಹಾಜರುಪಡಿಸುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಸ್ನೇಹಿತರು ಮತ್ತು ಚಿಟ್ ಫಂಡ್ ನಡೆಸುತ್ತಿದ್ದ ಸದಸ್ಯರಾದ ಟಿ.ವಿ ಜಯಣ್ಣ, ವಾಸುದೇವ, ಮಂಜುಳ, ಟಿ.ಡಿ ಗೋವಿಂದಪ್ಪ, ಟಿ.ಆರ್.ರಮೇಶ್ ಕುಮಾರ್,ಟಿ.ಎಸ್ ಕಿರಣ್ ಕುಮಾರ, ವೆಂಕಟೇಶ, ಟಿ.ಎಸ್ ಶಿವಕುಮಾರ ರವರ ಖಾತೆಗಳಿಗಾ ಕೂಡ ನನ್ನ ಗಂಡ 1ನೇ ಪ್ರತಿವಾದಿಯಿಂದ ಹಣ ಪಡೆದು ವರ್ಗಾಯಿಸಿಕೊಂಡು ತಾನೇ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಷಯ ನಿಜವಾಗಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಖಾತೆಯಿಂದ ನನ್ನ ಭಾವ ಟಿ.ಆರ್ ಅಶೋಕ್ ರವರ ಖಾತೆಗೆ ರೂ. 37,10,879/- ವರ್ಗಾವಣೆಯಾಗಿದೆ ಎಂದರೆ ಗೊತ್ತಿಲ್ಲ. 1ನೇ ಪ್ರತಿವಾದಿಯ

ಖಾತೆಯಿಂದ ನನ್ನ ಗಂಡನ ಖಾತೆಗೆ ರೂ.1,59,96,869.25 ಜಮಾಗೊಂಡಿದೆ ಎಂದರೆ ಸರಿಯಲ್ಲ. ಸದರಿ ಹಣ ಬಂದಿದ್ದರೂ ಕೂಡ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ನಿರ್ದೇಶನ ಮೇರೆಗೆ ನನ್ನ ಗಂಡನ ಸ್ನೇಹಿತರಾದ ಟಿ.ವಿ ಜಯಣ್ಣರವರ ಖಾತೆಗೆ ತರಿಕೆರೆಯ HDFC Bank, Karnataka Bank, Vijaya Bank and SBI ಖಾತೆಗೆ 1ನೇ ಪ್ರತಿವಾದಿ ತನ್ನ ಮೊಬೈಲ್ ಮೂಲಕ ಒಟ್ಟು ರೂ. 25,29,896.05 ಜಮಾಗೊಂಡಿದೆ ಎಂದರೆ ಗೊತ್ತಿಲ್ಲ. ಮೇಲೆ ಹೇಳಿದ ಎಲ್ಲಾ ಹಣದ ವ್ಯವಹಾರ ನನಗೆ ಗೊತ್ತಿದ್ದು, ನಿಜವಾಗಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಭಾವ ಟಿ.ಆರ್ ಅಶೋಕ ರವರ ಪತ್ನಿಯ ಹೆಸರು ಮಂಜುಳ. ನನ್ನ ಗಂಡನ ನಿರ್ದೇಶನದ ಮೇರೆಗೆ ಮಂಜುಳಾ ರವರ ತರಿಕೆರೆಯ SBI ಖಾತೆಗೆ 1ನೇ ಪ್ರತಿವಾದಿಯ ಮೊಬೈಲ್ ಮೂಲಕ ರೂ. 5,86,059/- ಜಮಾಗೊಂಡಿದೆ ಎಂದರೆ ಸುಳ್ಳು. ನನ್ನ ಗಂಡನ ನಿರ್ದೇಶನದ ಮೇರೆಗೆ ನನ್ನ ನಾದಿನಿಯಾದ ಜ್ಯೋತಿ ರವರ ತರಿಕೆರೆಯ Canara Bank ಖಾತೆಗೆ 36,511.08 ರೂ.ಗಳು ಜಮಾಗೊಂಡಿದೆ ಎಂದರೆ ಸರಿಯಲ್ಲ. ನನ್ನ ಗಂಡನ ನಿರ್ದೇಶನದ ಮೇರೆಗೆ ಅವರ ಚಿಟ್ ಫಂಡ್ ವ್ಯವಹಾರದ ಸದಸ್ಯರಾದ ವಾಸುದೇವರವರ ತರಿಕೆರೆಯ ವಿಜಯ ಬ್ಯಾಂಕ್ ಖಾತೆಗೆ ರೂ. 12,20,123-08 ಜಮಾಗೊಂಡಿದೆ ಎಂದರೆ ಸರಿಯಲ್ಲ.

ಟಿ.ಡಿ.ಗೋವಿಂದಪ್ಪ ಯಾರೆಂದು ಗೊತ್ತಿಲ್ಲ. ಅವರು ನನ್ನ ಗಂಡನ ಸಂಬಂಧಿಕರು ಎಂದರೆ ಗೊತ್ತಿಲ್ಲ. ಸದರಿ ಗೋವಿಂದಪ್ಪರವರ ತರಿಕೇರೆಯ ಕಾರ್ಪೋರೇಷನ್ ಬ್ಯಾಂಕ್ ಖಾತೆಗೆ ನನ್ನ ಗಂಡನ ನಿರ್ದೇಶನದಂತೆ 1ನೇ ಪ್ರತಿವಾದಿ ರೂ. 1,00,005/-ನ್ನು ಜಮಾ ಮಾಡಿದ್ದಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎಲ್ಲಾ ವಿಷಯಗಳು ನಿಜವಾಗಿದ್ದರೂ ಕೂಡ ಸುಳ್ಳು ಎಂದು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಯಾವುದೇ ಮನೆಯನ್ನು ಮಾರಾಟ ಮಾಡಲು ಬಂದಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನನ್ನ ಗಂಡನಿಂದ ಕೇವಲ ರೂ. 10 ಲಕ್ಷ ಸಾಲ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಸಾಲದ ಭದ್ರತೆಗಾಗಿ 1ನೇ ಪ್ರತಿವಾದಿಯಿಂದ ಸಹಿ ಮಾಡಿದ 60 ಖಾಲಿ ಚೆಕ್ ಗಳು, ರೂ. ಒಂದು ಸಾವಿರ ಬೆಲೆಯ ಎರಡು ಬಾಂಡ್ ಪೇಪರ್ ಗಳು, ರೂ. 500 ಬೆಲೆಯ ಎರಡು ಬಾಂಡ್ ಪೇಪರ್ ಗಳು, ನಿಪಿ-1 ರಿಂದ 5 ಕ್ಕೆ ಸಹಿ ಪಡೆದುಕೊಂಡು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಯಾಕೆ ಕರಾರಿಗೆ ಸಹಿ ಹಾಕಿಸಿಕೊಳ್ಳುತ್ತಿದ್ದಿರಿ ಎಂದು 1ನೇ ಪ್ರತಿವಾದಿ ಕೇಳಿದಾಗ ಪಡೆದುಕೊಂಡ ಸಾಲವನ್ನು ಬಡ್ಡಿ ಸಮೇತ ತೀರಿಸಿಬಿಡಿ, ಕರಾರು ಪತ್ರವನ್ನು ರದ್ದುಗೊಳಿಸುವುದಾಗಿ ಹೇಳಿದ್ದೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ತನ್ನ ಮಾತಿನಂತೆ ನಮಗೆ ಕೊಡಬೇಕಾಗಿದ್ದ ಹಣಕ್ಕಿಂತಲೂ ಹೆಚ್ಚಿನ ಹಣವನ್ನು ಜಮಾ ಮಾಡಿದ್ದರೂ ಸಹ ಅವರಿಗೆ ಕರಾರು ರದ್ದಿಯಾತಿ ಪತ್ರವನ್ನು ಬರೆದುಕೊಡದೇ ನಾನು ಮತ್ತು ನನ್ನ ಗಂಡ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ಮೀಟರ್ ಬಡ್ಡಿ ರೂಪದಲ್ಲಿ ಅಗತ್ಯಕ್ಕಿಂತಲೂ ಹೆಚ್ಚಿನ ಹಣವನ್ನು 1ನೇ ಪ್ರತಿವಾದಿಯಿಂದ ನಾವು ವಸೂಲು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ವ್ಯಾಪಾರದಲ್ಲಿ ನಷ್ಟ ಉಂಟಾಗಿ ನಮಗೆ ಹಣ ಬರುವುದು ನಿಂತು ಹೋದಾಗ ನನ್ನ ಗಂಡ ಅವರ ಬೆಂಬಲಿಗರನ್ನು ಕರೆದುಕೊಂಡು ಪ್ರತಿವಾದಿಯರ ಮನೆಯ ಮುಂದೆ ಹೋಗಿ ಗಲಾಟೆ ಮಾಡಿದ್ದೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನಮ್ಮ ವಿರುದ್ಧ ಹುಣಸೂರು ಪಟ್ಟಣ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ ಎಂದರೆ ಸರಿ. 1ನೇ ಪ್ರತಿವಾದಿಯ ಮನೆಯ ಮುಂದೆ ಯಾವುದೇ ಗಲಾಟೆ ಮಾಡುವುದಿಲ್ಲ ಎಂದು ನಾನು ಮತ್ತು ನನ್ನ ಗಂಡ ಪೋಲಿಸ್ ಠಾಣೆಯಲ್ಲಿ ಮುಚ್ಚಳಿಕೆ ಬರೆದುಕೊಟ್ಟೆವು ಎಂದರೆ ಸರಿ. ಆ ನಂತರವು ಕೂಡ ನಾವು ಪದೇ ಪದೇ ಹೋಗಿ ಗಲಾಟೆ ಮಾಡುತ್ತಿದ್ದೆವು ಎಂದರೆ ಸರಿಯಲ್ಲ.

1ನೇ ಪ್ರತಿವಾದಿ ನಮ್ಮ ವಿರುದ್ಧ ಪೊಲೀಸ್ ಠಾಣೆಗೆ ದಕೂರು ಕೊಟ್ಟ ನಂತರ ನಾನು ಮತ್ತು ನನ್ನ ಗಂಡ ಸೇರಿ ಚಿಕ್ಕಮಗಳೂರು ಜಿಲ್ಲೆಯ ತರಿಕೆರೆ ತಾಲ್ಲೂಕಿನ ಜೆ.ಎಂ.ಎಫ್ ಸಿ ನ್ಯಾಯಾಲಯದಲ್ಲಿ ಸಿಸಿ ನಂ. 828/2021 ರೀತಿ ಟಿ.ಎಸ್ ಶಿವಕುಮಾರ ರವರ ಕಡೆಯಿಂದ ರೂ. 12,50000/- ಕ್ಕೆ ಸಿಸಿ ನಂ. 821/2021 ರೀತಿ ಟಿ.ಆರ್ ರಮೇಶ್ ಕುಮಾರ್ ರವರ ಕಡೆಯಿಂದ ರೂ. 15,00,000/- ಕ್ಕೆ ಸಿಸಿ ನಂ. 98/2021 ರೀತಿ ವೆಂಕಟೇಶ ರವರ ಕಡೆಯಿಂದ ರೂ. 32,82000/- ಕ್ಕೆ ಸಿಸಿ ನಂ. 1082/2021 ರೀತಿ ಶಿವಶಂಕರಪ್ಪ ಟಿ.ಹೆಚ್ ರವರ ಕಡೆಯಿಂದ ರೂ. 50,00,000/- ಕ್ಕೆ ಸಿಸಿ ನಂ. 846/2021 ರೀತಿ ಟಿ.ಆರ್ ಅಣ್ಣಯ್ಯ ರವರ ಕಡೆಯಿಂದ ರೂ. 15,00,000/- ಕ್ಕೆ ಸಿಸಿ ನಂ. 845/2021 ರೀತಿ ಟಿ.ಆರ್ ರಮೇಶ್ ಕುಮಾರ್ ರವರ ಕಡೆಯಿಂದ ರೂ. 12,50,000/- ಕ್ಕೆ ಸಿಸಿ ನಂ. 97/2021 ರೀತಿ ಟಿ.ಎಸ್ ಕಿರಣ್ ಕುಮಾರ್ ರವರ ಕಡೆಯಿಂದ ರೂ. 800000/- ಕ್ಕೆ ಪ್ರಕರಣಗಳನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯಿಂದ ಭದ್ರತೆಗಾಗಿ

ಪಡೆದುಕೊಂಡ 60 ಚೆಕ್ ಗಳ ಪೈಕಿ 7 ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಮೇಲೆ ಹೇಳಿದವರ ಕಡೆಯಿಂದ 7 ಪ್ರಕರಣಗಳನ್ನು ದಾಖಲಿಸಿದ್ದೇವೆ ಎಂದರೆ ಈ ವ್ಯವಹಾರಗಳ ಬಗ್ಗೆ ನಮಗೂ ಮತ್ತು ನನ್ನ ಗಂಡನಿಗೂ ಗೊತ್ತಿಲ್ಲ. ನಾವು ಪದೇ ಪದೇ ಪ್ರತಿವಾದಿಯರ ಮನೆಯ ಮುಂದೆ ಹೋಗಿ ಗಲಾಟೆ ಮಾಡಿದ್ದೇವೆ, ತರಿಕೇರೆ ನ್ಯಾಯಾಲಯಕ್ಕೆ ಹಾಜರಾದಾಗ ಅವರಿಗೆ ಜೀವ ಬೆದರಿಕೆ ಹಾಕಿದ್ದೇವೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಕೃತ್ಯಗಳನ್ನು ಮಾಡಿದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಶಿವಶಂಕರಪ್ಪ ತರಿಕೆರೆಯ ಮಾಜಿ MLA ಎಂದರೆ ಸರಿ. 1ನೇ ಪ್ರತಿವಾದಿ ಪುನಃ ನಮ್ಮ ವಿರುದ್ಧ ದೂರು ಕೊಟ್ಟಾಗ ಮೇಲೆ ಹೇಳಿದ ಮಾಜಿ MLA ರವರ ಪ್ರಭಾವ ಬಳಸಿ ಪ್ರಕರಣ ದಾಖಲಾಗದಂತೆ ನಾವು ನೋಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾವು ನಮ್ಮ ಪ್ರಭಾವವನ್ನು ಬಳಸಿ ಪ್ರಕರಣ ದಾಖಲಾಗದಂತೆ ನೋಡಿಕೊಂಡಾಗ 1ನೇ ಪ್ರತಿವಾದಿ ನ್ಯಾಯಾಲಯದಲ್ಲಿ ಖಾಸಗೀ ದೂರನ್ನು ಸಲ್ಲಿಸಿ ಕ್ರಿಮಿನಲ್ ಪ್ರಕರಣ ದಾಖಲಾಗುವಂತೆ ಮಾಡಿದ್ದಾರೆ ಎಂದರೆ ಪ್ರಕರಣ ದಾಖಲಾಗಿದೆ. ಆ ಪ್ರಕರಣದಲ್ಲಿ ಸಿ.ಆರ್ 219/2022 ರಂತೆ ದಾಖಲಾಯಿತು ಎಂದರೆ ಸರಿ. ಪೋಲಿಸರು ತನಿಖೆ ಮಾಡಿ ನಮ್ಮ ವಿರುದ್ಧ ಅಂತಿಮ ವರದಿ ಸಲ್ಲಿಸಿ ಸಿ.ಸಿ 1111/2024 ರಂತೆ ದಾಖಲಾಗಿದೆ ಎಂದರೆ ಸರಿ. ಸದರಿ ಪ್ರಕರಣ ಯಾವಾಗ ಇದೆ ಎಂದು ಗೊತ್ತಿಲ್ಲ. ವಕೀಲರನ್ನು ನೇಮಿಸಿದ್ದೇವೆ. ಸದರಿ ಪ್ರಕರಣ ಇದೇ ತಿಂಗಳಿನ 30ನೇ ತಾರೀಖಿನಂದು ಇದ್ದು ಉದ್ದೇಶಪೂರ್ವಕವಾಗಿ ಸಮನ್ಸ್ ಸ್ವೀಕರಿಸುತ್ತಿಲ್ಲ ಎಂದರೆ ವಕೀಲರಿಗೆ ಹೇಳಿದ್ದೇವೆ. ಪೋಲಿಸರು ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆದು ನಮ್ಮ ಮನೆಯನ್ನು ಶೋಧಿಸಿದ್ದಾರೆ ಎಂದರೆ ಸರಿ. ಸರ್ಚ್ ಮಾಡಿದ ದಿನಾಂಕ ನೆನಪಿಲ್ಲ. ದಿಃ 25.12.2022 ರಂದು ಸರ್ಚ್ ಮಾಡಿದ್ದಾರೆ ಎಂದರೆ ಇರಬಹುದು. ಆ ದಿನ ನಾನು ಮತ್ತು ನನ್ನ ಗಂಡ ಮನೆಯಲ್ಲಿದ್ದೆವು. ಪೋಲಿಸರು ನಮ್ಮ ಮನೆಯಲ್ಲಿ ಶೋಧನೆ ಮಾಡಿದ ಬಗ್ಗೆ ಮಧ್ಯಾಹ್ನ 2-30 ರಿಂದ 4 ಗಂಟೆಯವರೆಗೆ ಸ್ಥಳ ಮತ್ತು ಅಮಾನತ್ತು ಮಹಜರು ಮಾಡಿದ್ದಾರೆ ಎಂದರೆ ಸರಿ. ನಮ್ಮ ಮನೆಯಿಂದ ಸಾರ್ವಜನಿಕರೊಂದಿಗೆ ನಡೆಸಿದ ಚೀಟಿಯ ಬಗ್ಗೆ ಒಟ್ಟು 4 ಚೀಟಿ ಪುಸ್ತಕಗಳನ್ನು ಅಮಾನತ್ತುಪಡಿಸಿಕೊಂಡಿದ್ದಾರೆ ಎಂದರೆ ಚೀಟಿ ಪುಸ್ತಕ ಅಮಾನತ್ತುಪಡಿಸಿಕೊಂಡಿದ್ದಾರೆ. ಯಶಸ್ಸು ಬಿನ್ ಶೇಖರ್ ಬಾಬು ರವರಿಗೆ ಸೇರಿದ Canara Bank ನ 2 ಖಾಲಿ ಚೆಕ್ ಗಳನ್ನು ಅಮಾನತ್ತುಪಡಿಸಿಕೊಂಡಿದ್ದಾರೆ ಎಂದರೆ ಇರಬಹುದು. ಶೇಖರ್ ಬಾಬು ರವರಿಗೆ ಸೇರಿದ ರೂ. 500 ರ ಮುಖಬೆಲೆಯ

ಮುದ್ರಾಂಕ ಕಾಗದಗಳನ್ನು ವಶಪಡಿಸಿಕೊಂಡಿದ್ದಾರೆ ಎಂದರೆ ಇರಬಹುದು. ಸ್ಟ್ಯಾಂಪ್ ಅಂಟಿಸಿದ 6 ಖಾಲಿ ಡಿ.ಪಿ ನೋಟುಗಳನ್ನು ವಶ ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಷಯ ನಿಜವಾಗಿದ್ದರೂ ಕೂಡ ಸುಳ್ಳು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಟಿ.ಸಿ ಮಂಜುನಾಥ ಬಿನ್ ಎನ್.ಆರ್ ಚಂದ್ರಪ್ಪರವರಿಗೆ ಸೇರಿದ 1000 ರೂ. ಮುಖ ಬೆಲೆಯ ಇ–ಸ್ಟ್ಯಾಂಪ್ ಪೇಪರ್ ವಶಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. 4 ಸಹಿ ಇರುವ ಡಿ.ಪಿ ನೋಟುಗಳು ಅವುಗಳಲ್ಲಿ ಜಯನಾಯಕ, ಚನ್ನಕೇಶವ, ಪ್ರಕಾಶ, ಮೋಹನ, ಪಾಪಯ್ಯ ರವರಿಗೆ ಸೇರಿದ ಡಿ.ಪಿ ನೋಟ್ ಆಗಿದ್ದು, ಖಾಲಿ ಇತ್ತು ಎಂದರೆ ಸರಿಯಲ್ಲ. ಸದರಿ ವಿಷಯ ನಿಜ ಆಗಿದ್ದರೂ ಕೂಡ ನಾನು ಸುಳ್ಳು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಯನಾಯಕರವರಿಗೆ ಸಂಬಂಧಪಟ್ಟ Karnataka Bank ನ ಖಾಲಿ ಚೆಕ್ ಮತ್ತು ಪ್ರೊನೋಟ್ ಇದ್ದು, ಅದಕ್ಕೆ ಸಹಿ ಮತ್ತು ಹೆಬ್ಬೆಟ್ಟಿನ ಗುರುತು ಇರುತ್ತದೆ ಎಂದರೆ ಸರಿಯಲ್ಲ. ಸದರಿ ವಿಷಯ ನಿಜ ಆಗಿದ್ದರೂ ಕೂಡ ನಾನು ಸುಳ್ಳು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೊಡ್ಡಯ್ಯ ಮತ್ತು ಕಲಾವತಿ ರವರಿಗೆ ಸಂಬಂಧಿಸಿದ ರೂ. 100ರ ಮುಖ ಬೆಲೆಯ ಇ–ಸ್ಟ್ಯಾಂಪ್ ಪೇಪರ್ ಇತ್ತು ಎಂದರೆ ಸರಿಯಲ್ಲ. ಇನ್ನೊಂದು ಬೀರುವಿನಲ್ಲಿ ಮತ್ತೊಂದು ಚೀಟಿ ಪುಸ್ತಕ ಸಿಕ್ಕಿತು ಎಂದರೆ ಸರಿಯಲ್ಲ. 15 ಖಾಲಿ ಡಿ ಪಿ ನೊಟುಗಳನ್ನು ಪೋಲಿಸರು ವಶಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎಲ್ಲಾ ದಾಖಲೆಗಳನ್ನು ನನ್ನ ಮುಂದೆ ವಶಪಡಿಸಿಕೊಂಡು ಅಮಾನತ್ತು ಮಹಜರು ಮಾಡಿದ್ದರುಾ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ತೋರಿಸುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನ ಗಂಡನದ್ದು ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ–4 ಎಂದು ಗುರುತಿಸಲಾಯಿತು.

(ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು